
16-12-2023
Udayavani Pg 01

ಡಿ.19ಕ್ಕೆ ಸಾವಯವ ಮೇಳ ಸಿರಿಧಾನ್ಯ ಪಾಕ ಸ್ಪರ್ಧೆ

ದೊಡ್ಡಬಳ್ಳಾಪುರ: ತಾಲೂಕಿನ ಕೃಷಿ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳವನ್ನು ಡಿ.19 ರಂದು ಮಧ್ಯಾಹ್ನ 12 ಗಂಟೆಗೆ ಇಲ್ಲಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆ ಆಯೋಜಿಸಲಾಗಿದೆ.

ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಸಾರ್ವಜನಿಕರೂ ಭಾಗವಹಿಸಬಹುದು, ಸಿರಿಧಾನ್ಯ ಸಸ್ಯಹಾರಿ ತಿನಿಸುಗಳಿಗೆ ಮಾತ್ರ ಅವಕಾಶ, ಮನೆಯಲ್ಲಿಯೇ ತಯಾರಿಸಿದ ಸಿರಿಧಾನ್ಯ ತಿನಿಸು ಪ್ರದರ್ಶಿಸಲು ಅವಕಾಶವಿದ್ದು ತೀರ್ಪುಗಾರರ ನಿರ್ಧಾರವೇ ಅಂತಿಮವಾಗಿರುತ್ತದೆ. ತಯಾರಿಸಿದ ತಿನಿಸುಗಳ ಪ್ರದರ್ಶನ, ತಯಾರಿಕೆಗೆ ಬಳಸಿದ ಪದಾರ್ಥಗಳ ಪ್ರದರ್ಶನ ತೋರಿಕೆ (presentation/appearance), ರುಚಿ, ಸುವಾಸನೆಗಳ ಮೇಲೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು



ಹಾಗೂ ಪ್ರತಿಸ್ಪರ್ಧಿ ಒಂದು ತಿನಿಸು (ಸಿಹಿ ಅಥವಾ ಖಾರ) ತಯಾರಿಸಲು ಮಾತ್ರ ಅವಕಾಶವಿದೆ. ಆಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ ಬೇಕಾಗುವ ಸಾಮಗ್ರಿಗಳು ಹಾಗೂ ತಯಾರಿಸುವ ವಿಧಾನ ಸಂಕ್ಷಿಪ್ತ ಮಾಹಿತಿಯೊಂದಿಗೆ ಅರ್ಜಿಯನ್ನು ಡಿ.18ರೊಳಗೆ ಸಂಬಂಧಪಟ್ಟ ತಾಲೂಕಿನ ಇ-ಮೇಲ್‌ಗೆ ಕಳುಹಿಸಬೇಕು.

ಜಿಲ್ಲಾ ಮಟ್ಟದ ಪ್ರಥಮ ಸ್ಥಾನಕ್ಕೆ ಸಿಹಿ ತಿನಿಸು ಅಥವಾ ಖಾರ ತಿನಿಸುಗಳಿಗೆ ತಲಾ ರೂ.5000 ಬಹುಮಾನ ನೀಡಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದವರು ಡಿ.23ರಂದು ಬೆಂಗಳೂರಿನಲ್ಲಿ ಏರ್ಪಡಿಸುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಖಾದ್ಯ ತಯಾರಿಸಲು ಬೇಕಾಗುವ ಸಾಮಗ್ರಿಗಳನ್ನು ತಾವೇ ತೆಗೆದುಕೊಂಡು ನಿಗದಿತ ಸ್ಥಳ ಹಾಗೂ ಸಮಯದಲ್ಲಿ ಖುದ್ದಾಗಿ ಖಾದ್ಯವನ್ನು ಅಲ್ಲಿಯೇ ತಯಾರಿಸಲು ಬದ್ಧರಾಗಿರಬೇಕು. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮೊಬೈಲ್ ಸಂಖ್ಯೆ 8277929923ಕ್ಕೆ ಸಂಪರ್ಕಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಲು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತ ಉತ್ಪಾದಕ ಸಂಸ್ಥೆಗಳಿಗೆ ಸರಕಾರದಿಂದ ಮತ್ತಷ್ಟು ಬಲ

ಸಾಲದ ಬಡ್ಡಿಗೆ ಶೇ.4ರಷ್ಟು ಸಹಾಯಧನ ಘೋಷಣೆ

■ **ಎಸ್.ಕೆ.ಚಂದ್ರಶೇಖರ್** ಮೈಸೂರು
chandrashekar.sk@timesgroup.com

ರೈತ ಉತ್ಪಾದಕರ ಸಂಸ್ಥೆಗಳನ್ನು(ಎಫ್‌ಪಿಒ) ಬಲಪಡಿಸಲು ರಾಜ್ಯಾದ್ಯಂತ ಹಿಂದುಳಿದ ತಾಲೂಕುಗಳ 100 ಎಫ್‌ಪಿಒಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳು ನೀಡುವ ತಲಾ 20 ಲಕ್ಷ ರೂ.ವರೆಗಿನ ಸಾಲಕ್ಕೆ ವಿಧಿಸುವ ಬಡ್ಡಿಯಲ್ಲಿ ಸರಕಾರ ಶೇ.4ರಷ್ಟು ಸಹಾಯಧನ ನೀಡಲು ಮುಂದಾಗಿದೆ.

2023-24ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ ಸರಕಾರದಿಂದ ಅನುಮೋದನೆ ನೀಡಲಾಗಿತ್ತು. ಪ್ರಸ್ತುತ ಅನುಷ್ಠಾನಗೊಳಿಸುತ್ತಿದ್ದು, ರೈತ ಉತ್ಪಾದಕ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.



ಯೋಜನೆ ಉದ್ದೇಶ: ರೈತ ಉತ್ಪಾದಕರ ಸಂಸ್ಥೆಗಳು ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆಗೆ ಸಂಬಂಧಿಸಿದ ನಾನಾ ತಂತ್ರಜ್ಞಾನಗಳ ಅಳವಡಿಕೆಯಿಂದ ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಆದಾಯ ವೃದ್ಧಿಸಲು ಸಹಕಾರಿಯಾಗುತ್ತದೆ.

ಮಾನದಂಡಗಳು

- ಕಂಪನಿ ಕಾಯಿದೆ 2013ರ ಅಡಿ ನೋಂದಾಯಿಸಿಕೊಂಡು, ಕನಿಷ್ಠ 600 ರೈತ, ಷೇರುದಾರರನ್ನು ಹೊಂದಿದ, ಇನ್‌ಪುಟ್-ಔಟ್‌ಪುಟ್ ವ್ಯವಹಾರದಲ್ಲಿ ಸಕ್ರಿಯವಾಗಿರುವ, 2022-23ನೇ ಸಾಲಿನಲ್ಲಿ ವಾರ್ಷಿಕ ಕನಿಷ್ಠ 20 ಲಕ್ಷ ರೂ.ವರೆಗೆ ವಹಿವಾಟು ಮಾಡಿರುವ ರೈತ ಉತ್ಪಾದಕ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದು.
- 2023ರ ಏಪ್ರಿಲ್ 1ರಿಂದ ಯೋಜನಾ ಘಟಕದ ಮಂಜೂರು ಪಡೆದು 2023-24ನೇ ಸಾಲಿನಲ್ಲಿ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಪ್ರಸ್ತ ಸಾಲಿನಲ್ಲಿ ಪಡೆದ ಗರಿಷ್ಠ 20 ಲಕ್ಷ ರೂ. ವರೆಗಿನ ಮಂಜೂರಾದ ಸಾಲಕ್ಕೆ ನಿಗದಿತ (ತೈಮಾಸಿಕ/ಅರ್ಧವಾರ್ಷಿಕ) ಅವಧಿಯೊಳಗೆ ಸಾಲ ಮರುಪಾವತಿ ಮಾಡಿದ ಸಂಸ್ಥೆಗಳು ಮಾತ್ರ ಬಡ್ಡಿಯಲ್ಲಿ ಶೇ. 4ರಷ್ಟು ಸಹಾಯಧನ ಪಡೆಯಬಹುದು.
- ಜೇಷ್ಠತೆ ಮತ್ತು ಅನುದಾನ ಲಭ್ಯತೆ ಆಧಾರದಲ್ಲಿ ಸಹಾಯಧನಕ್ಕೆ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ. ಅರ್ಜಿ ನಮೂನೆಯನ್ನು ಆಯಾ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಪಡೆದು, ಡಿ. 18ರೊಳಗೆ ದಾಖಲೆಗಳೊಂದಿಗೆ ಸಲ್ಲಿಸಬೇಕು.

16-12-2023
V-karanataka Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

ಎಥೆನಾಲ್ ತಯಾರಿಸಲು ಕಾಕಂಬಿ ಬಳಕೆಗೆ ಕೇಂದ್ರ ಸರಕಾರ ಅಸ್ತು

ಹೊಸದಿಲ್ಲಿ: ಸಕ್ಕರೆ ಕಾರ್ಖಾನೆಗಳಿಗೆ ಎಥೆನಾಲ್ ಉತ್ಪಾದಿಸಲು ಕಬ್ಬಿನ ರಸ ಮತ್ತು ಬಿ-ಹೆವಿ ಕಾಕಂಬಿ ಎರಡನ್ನೂ ಬಳಸಲು ಕೇಂದ್ರ ಸರಕಾರವು ಶುಕ್ರವಾರ ಅನುಮತಿ ನೀಡಿದೆ. ಆದರೆ ಈ ಉದ್ದೇಶಕ್ಕಾಗಿ ಸಕ್ಕರೆಯ ಬಳಕೆಯನ್ನು 17 ಲಕ್ಷ ಟನ್‌ಗಳಿಗೆ ಸೀಮಿತಗೊಳಿಸಿದೆ.

ಎಥೆನಾಲ್ ತಯಾರಿಸಲು ಕಬ್ಬಿನ ರಸ ಮತ್ತು ಕಾಕಂಬಿ ಬಳಸುವುದನ್ನು ಸರಕಾರ ನಿಷೇಧಿಸಿದ ಒಂದು ವಾರದ ಬಳಿಕ ಈ ಕ್ರಮ ಹೊರಬಿದ್ದಿದೆ. ಸರಕಾರದ ತೀರ್ಮಾನವನ್ನು ಉದ್ಯಮವು ವಿರೋಧಿಸಿತ್ತು.

ಕಬ್ಬಿನ ರಸ ಮತ್ತು ಸಕ್ಕರೆ ಪಾಕದ ಬಳಕೆಯನ್ನು ಎಥೆನಾಲ್ ತಯಾರಿಕೆಗೆ ಬಳಸಲು ತಕ್ಷಣವೇ ಜಾರಿಗೆ ಬರುವಂತೆ ಆದೇಶ ಹೊರಡಿಸಬೇಕು. ಡಿಸೆಂಬರ್ 7ರ ಆದೇಶವನ್ನು ಪರಿಶೀಲಿಸ ಬೇಕು ಎಂದು ಉದ್ಯಮದ ಪ್ರಮುಖರು ಒತ್ತಾಯಿಸಿದ್ದರು.

ಪ್ರಸಕ್ತ ಸರಬರಾಜು ವರ್ಷದಲ್ಲಿ ಕಬ್ಬಿನ ರಸವನ್ನು ಬಳಸಿ ಈಗಾಗಲೇ ಸ್ವಲ್ಪ ಪ್ರಮಾಣದ ಎಥೆನಾಲ್ ಅನ್ನು ಉತ್ಪಾದಿಸಲಾಗಿದೆ. ಸರಕಾರ ಡಿ. 7ರ ಆದೇಶವನ್ನು ಹೊರಡಿಸುವ ಮೊದಲು ಕಬ್ಬಿನ ರಸವನ್ನು ಬಳಸಿ 6 ಲಕ್ಷ ಟನ್ ಎಥೆನಾಲ್ ಅನ್ನು ಉತ್ಪಾದಿಸಲಾಗಿದೆ.

16-12-2023
V-karnataka Pg 04

ಹೆಸರಿಟ್ಟರೆ ಹೆಚ್ಚು ಹಾಲು ಕರೆವ ಹಸು

ಗೋವುಗಳನ್ನು ಅತ್ಯಂತ ಪ್ರೀತಿ ಮತ್ತು ಆಕ್ಕರೆಯಿಂದ ಪಾಲಿಸಿ, ಅವುಗಳಿಗೆ ಮಕ್ಕಳಂತೆ ಹೆಸರಿಟ್ಟು ಕರೆಯುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಹಾಲನ್ನು ನೀಡುತ್ತವೆ ಮತ್ತು ಆರೋಗ್ಯವಾಗಿರುತ್ತವೆ ಎನ್ನುವುದನ್ನು ಬ್ರಿಟನ್‌ನ ಕೃಷಿ ವಿಜ್ಞಾನಿಗಳು ದೃಢಪಡಿಸಿದ್ದಾರೆ.



■ ಕೆ.ಎನ್.ಶೈಲೇಶ್ ಹೊಳ್ಳ

ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಪರಸ್ಪರ ಹೊಂದಾಣಿಕೆ ಕುರಿತು ಬ್ರಿಟಿಷ್ ಜರ್ನಲ್ ನಡೆಸಿದ ಸಂಶೋಧನೆಯಲ್ಲಿ ಈ ಅಂಶ ಬಹಿರಂಗವಾಗಿದೆ. ಬ್ರಿಟನ್‌ನ ಕೃಷಿ ವಿಜ್ಞಾನಿಗಳು ತಾವು ನಡೆಸಿದ ಆ ಸಂಶೋಧನೆಯಲ್ಲಿ ಹಸುಗಳಿಗೆ ಹೆಸರಿಟ್ಟು ಕರೆಯುವುದರಿಂದ ಅವುಗಳು ಹತ್ತು ತಿಂಗಳ ಕಾವಿನಲ್ಲಿ ಸುಮಾರು 258 ಲೀಟರ್ ಹಾಲನ್ನು ಹೆಚ್ಚಾಗಿ ನೀಡಿರುವುದು ಕಂಡುಬಂದಿದೆ. 2009ರ ಜ.28ರಲ್ಲಿ ಈ ಕುರಿತಂತೆ ಪ್ರಾಯೋಗಿಕ ಪ್ರಯತ್ನವನ್ನು ನಡೆಸಿದ ಅಲ್ಲಿನ ವಿಜ್ಞಾನಿಗಳು ತಾವಂದು ಕೊಂಡಿದ್ದಕ್ಕಿಂತ ಹೆಚ್ಚಿನ ಲಾಭವನ್ನು ಇದರಿಂದ ಇಂದಿಗೂ ಪಡೆದುಕೊಳ್ಳುತ್ತಿದ್ದಾರೆ. ತಮ್ಮ ಬಳಿ ಇರುವ ಪ್ರತಿಯೊಂದು ಹಾಲು ಕೊಡುವ ಹಸುಗಳಿಗೆ ಹೆಸರನ್ನಿಟ್ಟು ಅವುಗಳ ಭಾವನೆಗೆ ಸ್ಪಂಧಿಸುತ್ತ ವ್ಯವಹಾರಿಕವಾಗಿ ಲಾಭವನ್ನು ಗಳಿಸುತ್ತಿದ್ದಾರೆ. ಹಿಂದೆಲ್ಲ ನಮ್ಮ ಪೂರ್ವಜರು ತಮ್ಮ ಮಕ್ಕಳಂತೆ ಕೊಟ್ಟಿಗೆಯಲ್ಲಿರುವ ಪ್ರತಿಯೊಂದು ಗೋವಿಗೂ ಒಂದೊಂದು ಹೆಸರನ್ನಿಡುತ್ತಿದ್ದುದರ ಹಿಂದಿನ ಮರ್ಮ ಇದರಿಂದ ತಿಳಿಯುತ್ತದೆ.

16-12-2023
Vijayavani Pg 06

ಬ್ಯಾಡಗಿ ಮೆಣಸಿನಕಾಯಿ 60 ಸಾವಿರ ರೂ.

ಬ್ಯಾಡಗಿ(ಹಾವೇರಿ): ಬ್ಯಾಡಗಿ ಕಡ್ಡಿ ಹಾಗೂ ಡಬ್ಬಿ ತಳಿ ಮೆಣಸಿನಕಾಯಿಗೆ ಇಲ್ಲಿನ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ 60 ಸಾವಿರ ರೂ. ಇದ್ದು, ರೈತರಿಗೆ ಬಂಪರ್ ಲಾಭ ದೊರಕುತ್ತಿದೆ. ಮಾರುಕಟ್ಟೆಗೆ ರಾಜ್ಯದ ಮೂಲೆಮೂಲೆಗಳಿಂದಲೂ ರೈತರು ಆಗಮಿಸುತ್ತಿದ್ದು, ವಾರದ ಆವಕ 50 ಸಾವಿರ ಚೀಲ ದಾಟಿದೆ. ಗುರುವಾರ (ಡಿ.14) ಮಾರುಕಟ್ಟೆಯಲ್ಲಿ ಕ್ವಿಂಟಾಲ್ ಕಡ್ಡಿ ಕಾಯಿಗೆ 66,666 ಸಾವಿರ ರೂ. ಹಾಗೂ ಡಬ್ಬಿ ಕಾಯಿಗೆ 60,720 ಸಾ.ರೂ. ಅತಿ ಹೆಚ್ಚು ಬೆಲೆಯಲ್ಲಿ ಮಾರಾಟವಾಗಿದೆ.

16-12-2023
Vijayavani Pg 06

16-12-2023
Udayavani Pg 01

ಇದೇ ಮೊದಲ ಬಾರಿ 10 ಸಾವಿರ ಗಡಿ ತಲುಪಿದ ಬೆಲೆ

ಖಡಕ್ ರೊಟ್ಟಿ ಪ್ರಿಯರಿಗೂ ನುಂಗಲಾರದ ತುತ್ತು

ಬಿಳಿ ಜೋಳ 3 ತಿಂಗಳಲ್ಲಿ ಕೆ.ಜಿ.ಗೆ 30 ರೂ. ದುಬಾರಿ!

• ಶ್ರೀಶೈಲ ಕೆ. ಬಿರಾದಾರ

ಬಾಗಲಕೋಟೆ: ಈರುಳ್ಳಿ, ಬೆಳ್ಳುಳ್ಳಿ ಬೆಲೆ ಗಗನಕ್ಕೇರಿದ ಬೆನ್ನಲ್ಲೇ ಉತ್ತರ ಕರ್ನಾಟಕದ ಪ್ರಮುಖ ಆಹಾರ ಬೆಳೆ ಬಿಳಿ ಜೋಳವೂ ದುಬಾರಿಯಾಗಿದೆ. ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತಿ ಕ್ವಿಂಟಲ್‌ಗೆ 10 ಸಾವಿರ ರೂ. ಗಡಿ ತಲುಪಿದೆ!

ಮಾರುಕಟ್ಟೆಯಲ್ಲಿ ಸದ್ಯ ಕ್ವಿಂಟಲ್‌ಗೆ 8ರಿಂದ 9800 ರೂ. ತಲುಪಿದ್ದು, ಮಾರ್ಚ್-ಏಪ್ರಿಲ್ ವೇಳೆಗೆ 10 ಸಾವಿರ ರೂ. ದಾಟುವ ಸಾಧ್ಯತೆ ಇದೆ. ಅಂದರೆ, ಕೆಜಿ ಜೋಳಕ್ಕೆ 3 ತಿಂಗಳಲ್ಲಿ ಸುಮಾರು 30 ರೂ. ಹೆಚ್ಚಳ ವಾದಂತಾಗಿದೆ. ಹೀಗಾಗಿ ಉತ್ತರ ಕರ್ನಾಟಕ ಭಾಗದ ರೊಟ್ಟಿ ಊಟವೂ ದುಬಾರಿಯಾಗುವ ಸಾಧ್ಯತೆ ಇದೆ.

ಬೆಂಗಳೂರು ಸೇರಿ ರಾಜ್ಯದ ಹಲವು ಹೋಟೆಲ್‌ಗಳಿಗೆ ಈ ಭಾಗದಿಂದಲೇ ಖಡಕ್ ರೊಟ್ಟಿ ಸಿದ್ಧಪಡಿಸಿ ಕಳುಹಿಸಲಾಗುತ್ತದೆ. ಅಲ್ಲದೇ ದಕ್ಷಿಣ ಕರ್ನಾಟಕ ಭಾಗದ ಯಾರೇ ಬಂಧು-ಸ್ನೇಹಿತರು ಈ ಭಾಗಕ್ಕೆ ಆಗಮಿಸಿದರೆ ಅವರಿಗೆ ಈ ಭಾಗದ ಖಡಕ್ ರೊಟ್ಟಿ, ದೊಣ್ಣಕಾಯಿ ಪಲ್ಲೆ, ಮೊಸರು, ಶೇಂಗಾ ಚಟ್ನಿ ಸಹಿತ ರುಚಿಕಟ್ಟಾದ ಊಟ ಬಡಿಸುತ್ತಾರೆ. ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬನಶಂಕರಿ ಸೇರಿ ಇಲ್ಲಿನ ಪ್ರವಾಸಿ ತಾಣಗಳಲ್ಲಿ ಖಡಕ್ ರೊಟ್ಟಿ, ಪುಂಡಿಪಲ್ಯೆ, ಮೊಸರು ಸಹಿತ ಉತ್ತರದ ಖಡಕ್ ಊಟ ಬಡಿಸುವ ಮಹಿಳೆಯರೂ ಇದ್ದಾರೆ. ಇದು ಹಸಿದವರ ಹೊಟ್ಟೆ ತುಂಬುವುದು ಒಂದೆಡೆಯಾದರೆ, ಬಡ ಮಹಿಳೆಯರ ಬದುಕಿನ ಬಂಡಿ ಸಾಗುವ ಉದ್ಯಮವೂ ಆಗಿದೆ.

3 ಜಿಲ್ಲೆಗಳಲ್ಲಿ ಹೆಚ್ಚು: ಬಾಗಲಕೋಟೆ, ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಜೋಳ ಬೆಳೆಯಲಾಗುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ 1.32 ಲಕ್ಷ ಹೆಕ್ಟೇರ್ ಹಿಂಗಾರು ಹಂಗಾಮಿನಲ್ಲಿ ಜೋಳ ಬೆಳೆದರೆ, ಬಾಗಲಕೋಟೆಯಲ್ಲಿ 1.05 ಲಕ್ಷ ಹೆಕ್ಟೇರ್, ವಿಜಯಪುರದಲ್ಲಿ 95,544 ಹೆಕ್ಟೇರ್ ಕ್ಷೇತ್ರದಲ್ಲಿ ಜೋಳ ಬೆಳೆಯಲಾಗುತ್ತದೆ. ರೈತರು ತಮ್ಮ ಮನೆಗೆ ಬೇಕಾಗುಷ್ಟು ಬೆಳೆಯುವ ಜತೆಗೆ ಮಾರುಕಟ್ಟೆಗೆ ಕ್ವಿಂಟಲ್‌ಗಟ್ಟಲೇ ಜೋಳ ತಂದು ಮಾರುತ್ತಾರೆ. ಗರಿಷ್ಠವೆಂದರೂ ಈವರೆಗೆ 6ರಿಂದ 7 ಸಾವಿರವರೆಗೆ ಮಾತ್ರ ಜೋಳ ಮಾರಾಟವಾಗಿದೆ. ಆದರೆ ಈ ಬಾರಿ 9 ಸಾವಿರ ದಾಟಿದ್ದು, ಇದು ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

ಬೆಲೆ ಏರಿಕೆಗೆ ಕಾರಣ ಏನು?

ಬಿಳಿ ಜೋಳ ನೀರಾವರಿಗಿಂತ ಮಳೆಯಾಶ್ರಿತ ಪ್ರದೇಶದಲ್ಲಿ ಅತ್ಯಂತ ಹುಲುಸಾಗಿ ಬೆಳೆಯುತ್ತದೆ. ಈ ಬಾರಿ ಬರಗಾಲ ಇದ್ದಿದ್ದರಿಂದ ಬಿಳಿಜೋಳ ಬಿತ್ತನೆ ಪ್ರಮಾಣ ಕಡಿಮೆಯಾಗಿದೆ. ಕೆಲವೆಡೆ ಲ್ಪಮಳೆ ಹಾಗೂ ನೀರಾವರಿ ಜಮೀನಿನಲ್ಲಿ ಬಿಳಿ ಜೋಳ ಬೆಳೆದಿದ್ದರೂ ಕೀಟಬಾಧೆ ಕಾಟ ಹೆಚ್ಚಾಗಿದೆ. ಹೀಗಾಗಿ ನಿರೀಕ್ಷಿತ ಪ್ರಮಾಣದ ಇಳುವರಿ ಸಾಧ್ಯವಿಲ್ಲ. ಇದೆಲ್ಲದರ ಪರಿಣಾಮ ದರ ಏರಿಕೆಯಾಗಿದೆ.



ಜಿಲ್ಲೆಯಲ್ಲಿ ಸುಮಾರು 55 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಜೋಳ ಬಿತ್ತನೆಯಾಗಿದೆ. ಸುಳಿರೋಗ ಬಿದ್ದು ಒಂದಷ್ಟು ರೈತರಿಗೆ ತೊಂದರೆಯಾಗಿತ್ತು. ಪ್ರತಿ ವರ್ಷಕ್ಕಿಂತ ನಿರೀಕ್ಷಿತ ಮಟ್ಟದಲ್ಲಿ ಈ ಬಾರಿ ಬಿಳಿ ಜೋಳ ಇಳುವರಿ ಬರುವ ಸಾಧ್ಯತೆ ಇಲ್ಲ.

• ಎಲ್.ಐ.ರೂಡಗಿ, ಉಪ ನಿರ್ದೇಶಕರು, ಕೃಷಿ ಇಲಾಖೆ, ಬಾಗಲಕೋಟೆ

ಎಲ್ಲೆಲ್ಲಿ ಬೆಳೆಯುತ್ತಾರೆ?

ಜಿಲ್ಲೆ	ಮುಂಗಾರು	ಹಿಂಗಾರು
ಬೆಳಗಾವಿ	16,060	1,32,069
ಬಾಗಲಕೋಟೆ	202	1,05,999
ಗದಗ	2840	79,796
ವಿಜಯಪುರ	--	95,544
ಧಾರವಾಡ	400	51,689

ಫಸಲ್ ಬಿಮಾ ಯೋಜನೆಯಲ್ಲಿ ಮುಂದುವರಿಯುವುದೋ, ಬೇಡವೋ?

ಬಗೆಹರಿಯದ ಬೆಳೆ ವಿಮೆ ಗೊಂದಲ

■ ರುದ್ರಣ್ಣ ಹರ್ತಿಕೋಟೆ ಬೆಳಗಾವಿ

ಬೆಳೆ ವಿಮೆ ಸರಿಯಾಗಿ ಪಾವತಿಯಾಗದೆ ರೈತರಿಗೆ ಅನ್ಯಾಯವಾಗುತ್ತಿದ್ದು, ವಿಮೆ ಕಂಪನಿಗಳಿಗೆ ಲಾಭವಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಮುಂದೇನು ಎಂಬ ಗೊಂದಲಕ್ಕೆ ರಾಜ್ಯ ಸರ್ಕಾರ ಸಿಲುಕಿದೆ. ಸರ್ಕಾರದಿಂದಲೇ ಸ್ವಂತ ಕಂಪನಿ ಮಾಡುವುದೋ, ಇರುವ ವ್ಯವಸ್ಥೆಯಲ್ಲಿಯೇ ಮುಂದುವರಿಯುವುದೋ ಅಥವಾ ಕಪ್ ಆ್ಯಂಡ್ ಕ್ಯಾಪ್ ಎಂಬ ನಿಯಮಕ್ಕೆ ಪರಿವರ್ತನೆಯಾಗುವುದೋ ಎಂಬ ಚರ್ಚೆ ಇದ್ದು ಸದ್ಯ ಯಾವುದೇ ನಿರ್ಧಾರಕ್ಕೆ ಬಂದಿಲ್ಲ.

ಕಾಂಗ್ರೆಸ್‌ನಲ್ಲಿಯೇ ಅನೇಕ ಶಾಸಕರು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ವ್ಯಾಪ್ತಿಯಿಂದ ಹಿಂದಕ್ಕೆ ಬರುವಂತೆ ಒತ್ತಾಯಿಸುತ್ತಿರುವುದು ಸರ್ಕಾರದ ಪಾಲಿಗೆ ನುಂಗಲಾರದ ಬಿಸಿತುಪ್ಪವಾಗಿದೆ. ಸರ್ಕಾರದಿಂದಲೇ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕು ಎಂಬ ಸಲಹೆಯನ್ನೂ ನೀಡುತ್ತಿದ್ದಾರೆ.

ವಿಮೆ ಸರಿಯಾಗಿ ಸಿಗದೆ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ವಿಮೆ ಸಿಕ್ಕರೆ ಅನುಕೂಲವಾಗುತ್ತದೆ ಎಂಬ ಅಭಿಪ್ರಾಯ ರೈತರ ವಲಯದಲ್ಲಿದೆ. ಇದುವರೆಗೂ ಕಂಪನಿಗಳಿಗೆ ಹೆಚ್ಚಿನ ಅನುಕೂಲವಾಗುತ್ತಿದೆ. ವಿಮೆ ಪರಿಹಾರ ಶೇ.60 ರಿಂದ 70 ಸಿಗುತ್ತಿಲ್ಲ. ಒಂದು ವರ್ಷ ಮಾತ್ರ ಹೆಚ್ಚಿನ ಮೊತ್ತದ ವಿಮೆ ಸಿಕ್ಕಿದೆ.

ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಸೇರಿ 37 ಬೆಳೆಗಳನ್ನು ವಿಮಾ ವ್ಯಾಪ್ತಿಯಲ್ಲಿವೆ. ರೈತರು ಶೇ.2 ವಿಮಾ ಕಂತು ಪಾವತಿಸಿದರೆ, ಉಳಿದ ಮೊತ್ತವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪಾವತಿಸುತ್ತಿವೆ.

ನಿಯಮಗಳಿಂದಾಗಿ ರೈತರಿಗಿಂತ ವಿಮಾ ಕಂಪನಿಗಳಿಗೇ ಹೆಚ್ಚಿನ ಲಾಭವಾಗುತ್ತಿದೆ ಎಂಬ ದೂರು ಕಳೆದ ಹಲವು ವರ್ಷಗಳಿಂದ ಕೇಳಿ ಬರುತ್ತಿದೆ. ನಿಯಮಗಳ ಬದಲಾವಣೆಗೆ ಕೇಂದ್ರದ ಮೇಲೆ ಒತ್ತಡ ತಂದರೂ ಉಪಯೋಗವಾಗಿಲ್ಲ.



ಯಾವ ವರ್ಷ ಎಷ್ಟು ವಿಮೆ (ಲಕ್ಷ ರೂ.ಗಳಲ್ಲಿ)

ಇಸವಿ	ನೋಂದಾಯಿತ ರೈತರು	ಫಲಾನುಭವಿಗಳ ಸಂಖ್ಯೆ	ಮೊತ್ತ
2016-17	25,77,861	18,70,463	1,85,308.71
2017-18	20,56,881	5,65,026	62,034.31
2018-19	20,93,995	13,11,311	2,65,090.56
2019-20	2,101,240	8,64,624	88,994.24
2020-21	15,16,014	5,15,246	63,753.94
2021-22	15,77,103	8,63,482	87,572.01
2022-23	22,79,613	13,78,437	1,31,436.66
ಒಟ್ಟು	1,42,02,707	73,68,589	8,84,190

ಒತ್ತಡವೇನು?

ಗುಜರಾತ್, ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು ಸೇರಿದಂತೆ ಕೆಲ ರಾಜ್ಯಗಳು ಫಸಲ್ ಬಿಮಾ ಯೋಜನೆಯಿಂದ ಹಿಂದಕ್ಕೆ ಬಂದು ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿವೆ. ರಾಜ್ಯದಿಂದಲೂ ಇದೇ ವ್ಯವಸ್ಥೆಯಾಗಬೇಕೆಂಬ ಬೇಡಿಕೆ ಇದೆ. ಆದರೆ, ಪ್ರತ್ಯೇಕ ಕಂಪನಿ ಆರಂಭಿಸಿದರೆ ವಾರ್ಷಿಕ 5 ಸಾವಿರ ಕೋಟಿ ರೂ.ಗಳ ಹೊರೆ ಬೀಳಲಿದೆ. ಏಕೆಂದರೆ ಕೇಂದ್ರ ಸರ್ಕಾರ ತನ್ನ ಪಾಲಿನ ಕಂತನ್ನು ಆಗ ಕೊಡುವುದಿಲ್ಲ. ಇಷ್ಟು ದೊಡ್ಡ ಮೊತ್ತವನ್ನು ಭರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ.

60:130 ಎಂದರೇನು?

60:130 ಮಾದರಿಯಲ್ಲಿ, ಶೇ.60ಕ್ಕಿಂತ ಕಡಿಮೆ ಪಾವತಿಯಾಗಿದ್ದರೆ ಉಳಿದ ಶೇ.40 ರಾಜ್ಯ ಸರ್ಕಾರಕ್ಕೆ ವಾಪಸ್ ನೀಡಬೇಕು. ಶೇ.130ಕ್ಕಿಂತ ಹೆಚ್ಚಿನ ಮೊತ್ತ ವಿಮೆ ಪಾವತಿಯಾಗಿದ್ದರೆ ಉಳಿದ ಶೇ.30 ರಷ್ಟನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಮೆ ಕಂಪನಿಗಳಿಗೆ ಪಾವತಿ ಮಾಡಬೇಕಾಗುತ್ತದೆ. ವಿಮೆ ಕಂಪನಿಗಳು ಶೇ.20ಕ್ಕಿಂತ ಹೆಚ್ಚಿನ ಲಾಭಾಂಶ ಇಟ್ಟುಕೊಳ್ಳುವಂತಿಲ್ಲ.

ಏನಿದು 80:110?

ಮೊದಲ ಮಾದರಿ 80:110 ರಲ್ಲಿ ಒಂದು ವರ್ಷ ವಿಮೆಯ ಮೊತ್ತದಲ್ಲಿ ರೈತರಿಗೆ ಶೇ.80 ಕ್ಕಿಂತ ಕಡಿಮೆ ಪಾವತಿ ಮಾಡಿದ್ದರೆ ಶೇ.20ರಷ್ಟನ್ನು ವಿಮಾ ಕಂಪನಿಗಳು ಸರ್ಕಾರಕ್ಕೆ ನೀಡಬೇಕು. ಶೇ.110 ವಿಮೆಯ ಮೊತ್ತ ಪಾವತಿ ಮಾಡಿದ್ದರೆ ಸರ್ಕಾರ ಉಳಿದ ಶೇ.10 ವಾಪಸ್ ತುಂಬಿಕೊಡಬೇಕು.

ಕಪ್ ಆ್ಯಂಡ್ ಕ್ಯಾಪ್ ಮಾದರಿ

ಕೃಷಿ ವಿಮೆಯಲ್ಲಿ ಹೊಸ ವ್ಯವಸ್ಥೆ ಬರುತ್ತಿದೆ. ಕಪ್ ಆ್ಯಂಡ್ ಕ್ಯಾಪ್ ಅಥವಾ ಅಶ್ಯುರೆನ್ಸ್ ಮಾದರಿ ಎಂದು ಕರೆಯಲಾಗುತ್ತದೆ. ಯೋಜನೆಯಲ್ಲಿ 80:110 ಅಥವಾ 60:130 ಎಂಬ ಮಾದರಿಗಳಿವೆ. ಯಾವುದನ್ನು ಅಳವಡಿಸಿಕೊಳ್ಳಬಹುದು ಎಂಬ ಚರ್ಚೆ ನಡೆದಿದೆ. ಮಹಾರಾಷ್ಟ್ರ ಸೇರಿ ಒಂದೆರಡು ರಾಜ್ಯಗಳಲ್ಲಿ ಕಪ್ ಆ್ಯಂಡ್ ಕ್ಯಾಪ್ ವ್ಯವಸ್ಥೆ ಅಳವಡಿಸಿಕೊಂಡಿವೆ.

